ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ,ಬೆಂಗಳೂರು

ಸಂಖ್ಯೆ:ದೈಶಿ MHRD SSPF/ನೋಂ NT-SN/ /2016-17 ದಿನಾಂಕ: 08/12/2016

## ಜ್ಞಾಪನ

ವಿಷಯ:- NTSN 2016-017ರ ರಾಷ್ಟ್ರೀಯ ಕ್ರೀಡಾ ಕೂಟಕ್ಕೆ ವಿದ್ಯಾರ್ಥಿಗಳ/ತಂಡಗಳನ್ನು ನೋಂದಾಯಿಸಿ ಭಾಗವಹಿಸುವ ಬಗ್ಗೆ.

ಉಲ್ಲೇಖ:- ಶ್ರೀ ರವಿಶಂಕರ್ ಪಂಡಿತ್ ನೋಡಲ್ ಅಧಿಕಾರಿಗಳು SSPF (School Sports Promotion Foundation) ನವದೆಹಲಿರವರ ಇ-ಮೇಲ್ ಪತ್ರ ದಿನಾಂಕ: 19/11/2016.

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ SSPF ಮತ್ತು ಭಾರತೀಯ ಕ್ರೀಡಾ ಪ್ರಾಧಿಕಾರದ ಸಹಭಾಗಿತ್ವದಲ್ಲಿ 02ನೇ NTSN 2016-17ರ ಕ್ರೀಡಾ ಕೂಟಗಳನ್ನು ಡಿಸೆಂಬರ್ 2016 ಮತ್ತು ಜನವರಿ 2017ರಲ್ಲಿ ನಡೆಸಲಾಗುತ್ತಿದ್ದು, ಸದರಿ ಕ್ರೀಡಾಕೂಟದಲ್ಲಿ ಫುಟ್‌ಬಾಲ್, ಕ್ರಿಕೆಟ್, ವಾಲಿಬಾಲ್, ಬ್ಯಾಸ್ಕೆಟ್‌ಬಾಲ್ ಮತ್ತು ಅಥ್ಲೆಟಿಕ್ಸ್ ಆಟಗಳಿಗೆ ಅವಕಾಶವಿರುತ್ತದೆ. ಸದರಿ ಸ್ಪರ್ಧೆಗಳಿಗೆ ಖಾಸಗಿ ಮತ್ತು ಸರ್ಕಾರಿ ಶಾಲೆಗಳ 10 ರಿಂದ 15 ವರ್ಷ ವಯೋಮಿತಿಯೊಳಗಿನ ರಾಜ್ಯ ಮತ್ತು ಕೇಂದ್ರ ಪಠ್ಯಕ್ರಮದ ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ತಂಡದಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ.

ಸದರಿ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ತಂಡಗಳಿಗೆ ರೂ.10.00 ಲಕ್ಷಗಳ ವಾರ್ಷಿಕ ವಿದ್ಯಾರ್ಥಿ ವೇತನವನ್ನು ತಂಡದ ಪ್ರತಿ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಕ್ರೀಡಾ ತರಬೇತಿಗೆ ಭರಿಸಲು ಮಂಜೂರಾತಿಗೆ ಅವಕಾಶವಿರುತ್ತದೆ.

ಆದ್ದರಿಂದ ಈ ಮೂಲಕ ತಿಳಿಸುವುದೇನೆಂದರೆ ತಮ್ಮ ಅಧಿಕಾರ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಲ್ಲಿನ ಶಾಲೆಗಳಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಿ ಈ ಸ್ಪರ್ಧೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ತಂಡ ಮತ್ತು ಶಾಲೆಗಳು SSPF ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಲು ಕ್ರಮ ಕೈಗೊಂಡು ವರದಿ ಮಾಡಲು ಸೂಚಿಸಿದೆ. ಈ ಬಗ್ಗೆ MHRD ರವರಿಂದ ಬಂದಿರುವ ಪತ್ರದ ಪ್ರತಿ ಲಗತ್ತಿಸಿದೆ. ಅದರಂತೆ ಸೂಕ್ತ ಕ್ರಮ ಕೈಗೊಂಡು ವರದಿ ಮಾಡಲು ಸೂಚಿಸಿದೆ.

ತಂಡಗಳ ನೋಂದಣಿಗೆ On Line ನಲ್ಲಿ ಕ್ರಮವಹಿಸಲು ತಿಳಿಸಿದೆ. ವೆಬ್ ವಿಳಾಸ WWW. Sspf.in

**Help Line – 8595-333-222**

**ನೋಡಲ್ ಅಧಿಕಾರಿ : ರವಿ ಶಂಕರ್ ಪಂಡಿತ್ – 9910183464**

ದೂರವಾಣಿ: 01147342000 Extn 262

Sd/-
ನಿರ್ದೇಶಕರು
(ಪ್ರೌಢ ಶಿಕ್ಷಣ)

ಗೆ,

ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ.